# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 223 |
| ಸದಸ್ಯರ ಹೆಸರು | : | ಶ್ರೀ. ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.12.2018 |
| ಉತ್ತರಿಸುವ ಸಚಿವರು | : | ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಪಶುಸಂಗೋಪನೆ ಇಲಾಖೆಯ ಮೂಲಭೂತ ಸೌಲಭ್ಯಗಳ ಮತ್ತು ಸಿಬ್ಬಂದಿಗಳ ಕೊರತೆಯನ್ನು ಎದುರಿಸುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದೆಯೇ: | ಹೌದು, ಸಿಬ್ಬಂದಿ ಕೊರತೆ ಇರುತ್ತದೆ. ಆದರೆ ಪಶುಸಂಗೋಪನೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಹುತೇಕ ಪಶುವೈದ್ಯ ಸಂಸ್ಥೆಗಳು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹೊಂದಿ ಕಾರ್ಯ ನಿರ್ವಹಿಸುತ್ತಿರುತ್ತವೆ. |
| ಆ) | ಹಾಗಿದ್ದಲ್ಲಿ, ಪಶು ಆಸ್ಪತ್ರೆಗಳಿಗೆ ಮೂಲಭೂತ ಸೌಲಭ್ಯ ಮತ್ತು ಅಗತ್ಯ ಸಿಬ್ಬಂದಿಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು: **(ವಿವರ ನೀಡುವುದು)** | ಪಶು ಆಸ್ಪತ್ರೆಗಳಿಗೆ ಅಗತ್ಯ ಸಿಬ್ಬಂದಿಗಳನ್ನು ಒದಗಿಸಲು ಸರ್ಕಾರ ಈ ಕೆಳಕಂಡಂತೆ ಕ್ರಮತೆಗೆದುಕೊಂಡಿದೆ.<br><br>**"ಎ"ವೃಂದ:-**<br>**ಸಹಾಯಕ ನಿರ್ದೇಶಕರು:-**ಪಶುವೈದ್ಯಾಧಿಕಾರಿಗಳ ಹುದ್ದೆಯಿಂದ ಮುಂಬಡ್ತಿ ನೀಡಬೇಕಾಗಿದ್ದು, ಕಾಲಮಿತಿ ಮುಂಬಡ್ತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಿದೆ.<br><br>**ಪಶುವೈದ್ಯಾಧಿಕಾರಿ:-**ವಿಶೇಷ ನೇಮಕಾತಿ ನಿಯಮ 2017 ರಡಿಯಲ್ಲಿ ಒಟ್ಟು 476 ಹುದ್ದೆಗಳನ್ನು ತುಂಬಲಾಗಿದ್ದು ಹೈದರಾಬಾದ್-ಕರ್ನಾಟಕ ಮೀಸಲು ಹುದ್ದೆಯಲ್ಲಿ ಆಯ್ಕೆಯಾದ 75 ಅಭ್ಯರ್ಥಿಗಳಲ್ಲಿ ಸಿಂಧುತ್ವ ಬಂದಿರುವ 57 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ. ಪ್ರಸ್ತುತ ಖಾಲಿ ಇರುವ 466 ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಕ್ರಮ ವಹಿಸಲಾಗಿದೆ.<br><br>'ಬಿ' ವೃಂದದ ಜಾನುವಾರು ಅಧಿಕಾರಿ ಹುದ್ದೆಯಿಂದ ಜಾನುವಾರುಅಭಿವೃದ್ಧಿ ಅಧಿಕಾರಿ ಹುದ್ದೆಗೆ ಮುಂಬಡ್ತಿ ಮುಖಾಂತರ ಹುದ್ದೆಗಳನ್ನು ಭರ್ತಿ ಮಾಡಲು ಹಾಗೂ 'ಸಿ' ವೃಂದದ ಹುದ್ದೆಗಳನ್ನು ಮುಂಬಡ್ತಿ/ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಕ್ರಮವಹಿಸಲಾಗಿದೆ ಹಾಗೂ ಪಶುವೈದ್ಯಕೀಯ ಪರೀಕ್ಷಕರ 509 ಹುದ್ದೆಗಳು ಹಾಗೂ ಪಶುವೈದ್ಯಕೀಯ ಸಹಾಯಕರ 1384 ಹುದ್ದೆಗೆ ನೇಮಕಾತಿ ಮಾಡಲು ಕ್ರಮ ವಹಿಸಲಾಗಿದೆ. |

| | | |
|---|---|---|
| | | **ಡಿ–ದರ್ಜೆ:**–ಇಲಾಖೆಯಲ್ಲಿ ಖಾಲಿ ಇರುವ "ಡಿ"ದರ್ಜೆ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ ಹಾಗೂ ಪ್ರಸ್ತುತ 1500 ಹುದ್ದೆಗಳಿಗೆ ಹೊರಗುತ್ತಿಗೆ ಸೇವೆ ಪಡೆಯಲಾಗಿದ್ದು, ಇನ್ನು ಹೆಚ್ಚುವರಿಯಾಗಿ 756 ಹುದ್ದೆಗಳಿಗೆ ಡಿ ದರ್ಜೆ ನೌಕರರನ್ನು ಹೊರಗುತ್ತಿಗೆ ಮುಖಾಂತರ ಸೇವೆ ಪಡೆಯಲು ಕ್ರಮ ವಹಿಸಲಾಗಿದೆ. |
| ಇ) | ಬೆಳಗಾವಿ ವಿಭಾಗದಲ್ಲಿ ಎಷ್ಟು ಪಶು ಆಸ್ಪತ್ರೆಗಳು ಇವೆ: ಈ ವಿಭಾಗದಲ್ಲಿ ಆಸ್ಪತ್ರಗಳಿಗೆ ಮಂಜೂರಾದ ವೃಂದವಾರು ಹುದ್ದೆಗಳೆಷ್ಟು: ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು: ಖಾಲಿ ಇರುವ ಹುದ್ದೆಗಳೆಷ್ಟು:(ವಿವರ ನೀಡುವುದು) | ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಬೆಳಗಾವಿ ವಿಭಾಗದಲ್ಲಿ ಮಂಜೂರು, ಭರ್ತಿ ಹಾಗೂ ಖಾಲಿ ಹುದ್ದೆಗಳ ವಿವರ ಈ ಕೆಳಗಿನಂತಿರುತ್ತದೆ. |

| ಕ್ರ ಸಂ | ಜಿಲ್ಲೆಗಳು | "ಎ"ವೃಂದ | | | "ಬಿ"ವೃಂದ | | | "ಸಿ"ವೃಂದ | | | "ಡಿ"ವೃಂದ | | |
|---|---|---|---|---|---|---|---|---|---|---|---|---|---|
| | | ಮಂ | ಭ | ಖಾ | ಮಂ | ಭ | ಖಾ | ಮಂ | ಭ | ಖಾ | ಮಂ | ಭ | ಖಾ |
| 1 | ಬೆಳಗಾವಿ | 216 | 145 | 71 | 11 | 09 | 02 | 408 | 360 | 48 | 450 | 204 | 246 |
| 2 | ವಿಜಯಪುರ | 101 | 75 | 26 | 8 | 5 | 3 | 235 | 218 | 17 | 229 | 83 | 146 |
| 3 | ಬಾಗಲಕೋಟೆ | 115 | 75 | 40 | 08 | 04 | 04 | 224 | 208 | 16 | 243 | 69 | 174 |
| 4 | ಧಾರವಾಡ | 78 | 56 | 22 | 7 | 4 | 3 | 191 | 151 | 40 | 172 | 81 | 91 |
| 5 | ಗದಗ್ | 87 | 28 | 59 | 06 | 02 | 04 | 134 | 80 | 54 | 384 | 151 | 233 |
| 6 | ಹಾವೇರಿ | 101 | 63 | 38 | 09 | 04 | 05 | 242 | 116 | 126 | 231 | 51 | 180 |
| 7 | ಉತ್ತರ ಕನ್ನಡ | 131 | 40 | 91 | 13 | 06 | 07 | 237 | 117 | 120 | 236 | 41 | 195 |
| | ಒಟ್ಟು | 829 | 482 | 347 | 62 | 34 | 28 | 1671 | 1250 | 421 | 1945 | 680 | 1265 |

| | | |
|---|---|---|
| ಈ) | 2016-17, 2017-18 ನೇ ಸಾಲಿಗೆ ಬೆಳಗಾವಿ ವಿಭಾಗಕ್ಕೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು (ಅಭಿವೃದ್ಧಿ ಪಡಿಸಲು) ಸರ್ಕಾರ ಮಂಜೂರು ಮಾಡಿದ ಅನುದಾನವೆಷ್ಟು: ಆ ಪೈಕಿ ಬಳಕೆಯಾದ ಅನುದಾನವೆಷ್ಟು: ಯಾವಯಾವ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ: (ವಿವರ ನೀಡಲಾಗಿದೆ) | 2016-17, 2017-18 ನೇ ಸಾಲಿಗೆ ಬೆಳಗಾವಿ ವಿಭಾಗಕ್ಕೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು (ಅಭಿವೃದ್ಧಿ ಪಡಿಸಲು) ಮಂಜೂರು ಮಾಡಿದ ಅನುದಾನಗಳ ವಿವರಗಳನ್ನು **ಅನುಬಂಧ** ದಲ್ಲಿ ಲಗತ್ತಿಸಿದೆ. ಪಶು ವೈದ್ಯಕೀಯ ಸಂಸ್ಥೆಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗಿದೆ. |
| ಉ | ಬೆಳಗಾವಿ ವಿಭಾಗದಲ್ಲಿ ಖಾಲಿ ಇರುವ ಪಶುವೈದ್ಯರ್ಯನ್ನು ಹಾಗೂ ಅಗತ್ಯ ಸಿಬ್ಬಂದಿಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು? | ಬೆಳಗಾವಿ ವಿಭಾಗದಲ್ಲಿ ಖಾಲಿ ಇರುವ ಪಶುವೈದ್ಯರ್ಯನ್ನು ಹಾಗೂ ಅಗತ್ಯ ಸಿಬ್ಬಂದಿಗಳನ್ನು ಹಂತಹಂತವಾಗಿ ಆದ್ಯತೆ ಮೇಲೆ ಭರ್ತಿ ಮಾಡಲು ಅಗತ್ಯ ಕ್ರಮಕೈಗೊಳ್ಳಲಾಗುವುದು. |

ಸಂ: ಪಸಂಮೀ 132 ಪಸಸೇ 2018

(ವೆಂಕಟ್‌ರಾವ್ ನಾಡಗೌಡ)
ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು

ಅನುಬಂಧ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 223/2018ಕ್ಕೆ ಉತ್ತರ

| | | 2016-17 ನೇ ಸಾಲು(ಆರ್.ಐ.ಡಿ.ಎಫ್ ಕಾರ್ಯಕ್ರಮದಡಿ) | | | 2017-18 ನೇ ಸಾಲು(ಆರ್.ಐ.ಡಿ.ಎಫ್ ಕಾರ್ಯಕ್ರಮದಡಿ) | | | |
|---|---|---|---|---|---|---|---|---|
| ಕ್ರ ಸಂ | ಜಿಲ್ಲೆ | ಮಂಜೂರಾದ ನೂತನ ಕಾಮಗಾರಿಗಳ ಸಂಖ್ಯೆ | ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ) | ಒಟ್ಟು ನಿರ್ಮಾಣ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) | ಮಂಜೂರಾದ ನೂತನ ಕಾಮಗಾರಿಗಳ ಸಂಖ್ಯೆ | ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ) | ಒಟ್ಟು ನಿರ್ಮಾಣ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) | ಷರಾ |
| 1 | ಬೆಳಗಾವಿ * | 3 | 97.3 | * | 12 | 433.6 | * | |
| 2 | ಬಾಗಲಕೋಟೆ | 1 | 30.9 | 30.9 | 1 | 36.6 | 36.6 | |
| 3 | ಧಾರವಾಡ ** | 1 | 215 | ** | 8 | 264.96 | 208.28 * | |
| 4 | ಗದಗ | – | – | – | 1 | 36.6 | 31.6 | |
| 5 | ಹಾವೇರಿ ** | 3 | 271.8 | 61.8 ** | 3 | 98.9 | 98.9 | |
| 6 | ಉತ್ತರ ಕನ್ನಡ ** | 3 | 230.8 | 60.8 ** | 1 | 36.6 | 33.6 | |
| 7 | ವಿಜಯಪುರ ** | 3 | 220.8 | 61.8 ** | 2 | 73.2 | 73.2 | |

* ರಾಜ್ಯಾದಂತ ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರಿಗೆ ಟ್ರಾಂಚ್ 22 ರಲ್ಲಿ ರೂ.723.55 ಲಕ್ಷಗಳನ್ನು ಮತ್ತು ಟ್ರಾಂಚ್ 23 ರಲ್ಲಿ ರೂ.905.04 ಲಕ್ಷಗಳನ್ನು ಹಾಗೂ

** ಕೆ.ಹೆಚ್.ಬಿ. ಸಂಸ್ಥೆಯವರಿಗೆ ಟ್ರಾಂಚ್ 22 ರಲ್ಲಿ ರೂ.1100.00 ಲಕ್ಷಗಳನ್ನು ನೀಡಿದ್ದು ಈ ಅನುದಾನದಲ್ಲಿ ಬೆಳಗಾಂ ವಿಭಾಗದಲ್ಲಿರುವ ಕಟ್ಟಡಗಳಿಗಾಗಿ ಸಹಾ ಉಪಯೋಗಿಸಿಕೊಂಡು ನಿರ್ಮಾಣ ಮಾಡಲಾಗುತ್ತಿದೆ.